**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**ಕ್ರಿಮಿನಲ್ ಮಿಸ್ ಸಂಖ್ಯೆ 549/2023**

**ಆರ್.ಡಬ್ಲ್ಯು: 1**

**ದಿನಾಂಕಃ 05.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎದುರುದಾರರಪರ: ಶ್ರೀ. ಐ.ಕೆ. ವಕೀಲರಿಂದಃ–**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸುತ್ತಿದ್ದೇನೆ. ಅದನ್ನು ಓದಿ ತಿಳಿದು, ಸಹಿ ಮಾಡಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ಮುಂದುವರೆದು ಅರ್ಜಿದಾರರಿಗೆ ಸಾಕಷ್ಟು ವರಮಾನವಿದ್ದು ಅದಕ್ಕೆ ಸಂಬಂಧಿಸಿದಂತೆ ನಾನು ಅರ್ಜಿದಾರರಿಗೆ ಸೇರಿದ ಬ್ಯಾಂಕ್ ಸ್ಟೇಟ್‌ಮೆಂಟ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಿರುತ್ತೇನೆ. ಅದನ್ನು ನಿಆರ್.1 ಎಂದು ಗುರುತಿಸಲಾಯಿತು.

ಅರ್ಜಿದಾರರು ಪದವಿಯನ್ನು ಮುಗಿಸಿರುವ ಕುರಿತು ಆರ್.ಟಿ.ಐ. ಅಡಿಯಲ್ಲಿ ಪಡೆದ ನಮೂನೆ–ಎ ಅನ್ನು ಹಾಜರುಪಡಿಸಿದ್ದು ಅದನ್ನು ನಿಆರ್.2 ಎಂದು ಗುರುತಿಸಲಾಯಿತು.

ಅರ್ಜಿದಾರರಿಗೆ ಕೊಡಿಸಿರುವ ಭೀಮ ಜ್ಯುವಲರಿ ಅಂಗಡಿಯ ಒಡವೆ ಚೀಟಿಗಳನ್ನು ಹಾಜರುಪಡಿಸಿದ್ದು ಅದನ್ನು ನಿಆರ್.3 ಎಂದು ಗುರುತಿಸಲಾಯಿತು.

ಅರ್ಜಿದಾರರ ಖಾತೆಯಲ್ಲಿ ಎದುರುದಾರರ ಒಡವೆಗಳನ್ನು ಅಡವಿಟ್ಟ ಬಗ್ಗೆ ಒಡವೆ ಅಡಮಾನದ ಚೀಟಿಯನ್ನು ಹಾಜರುಪಡಿಸಿದ್ದು ಅದನ್ನು ನಿಆರ್.4 ಎಂದು ಗುರುತಿಸಲಾಯಿತು.

2016 ರಲ್ಲಿ ಬೆಂಗಳೂರಿನ ಆರ್.ಟಿ.ನಗರದ ಬಾಡಿಗೆ ಮನೆ ಮಾಡಿದಾಗ ಅಲ್ಲಿ ತೆಗೆದುಕೊಂಡ ಅನಿಲ ಸಂಪರ್ಕಕ್ಕೆ ಸಂಬಂಧಿಸಿದ Subscription Voucher ಅನ್ನು

ಹಾಜರುಪಡಿಸಿದ್ದು ನಿಆರ್.5 ಎಂದು ಗುರುತಿಸಲಾಯಿತು.

ಎದುರುದಾರರ ಆದಾಯ ಮತ್ತು ಜಾತಿ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಆರ್.6 ಎಂದು ಗುರುತಿಸಲಾಯಿತು.

ನಾನು ನನ್ನ ಕಾರನ್ನು ಬೇರೆಯವರಿಗೆ ಮಾರಾಟ ಮಾಡಿದ್ದು ಅದಕ್ಕೆ ಸಂಬಂಧಿಸಿದಂತೆ ಬ್ಯಾಂಕಿನ ಮೂಲಕ ಟ್ರಾನ್ಸ್ ವರ್ ಮಾಡಿದ ದಾಖಲೆಯನ್ನು ಹಾಜರುಪಡಿಸಿದ್ದು ಅದನ್ನು ನಿಆರ್.7 ಎಂದು ಗುರುತಿಸಲಾಯಿತು.

ಕಡೂರಿನ ಹಿರಿಯ ಸಿವಿಲ್ ನ್ಯಾಯಾಲಯದ ಎಂ.ಸಿ.ನಂಬರು 110/2023 ರ ಆದೇಶದ ಪುಟದ ದೃಢೀಕೃತ ನಕಲನ್ನು ಹಾಗೂ ಮೆಮೋದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಆರ್.8 ಎಂದು ಗುರುತಿಸಲಾಯಿತು.

ವೈಭವ್ ಮಾರ್ಟ್ ಗೆ ಸಂಬಂಧಿಸಿದ ರಿಜಿಸ್ಟ್ರೇಷನ್ ಸರ್ಟಿಫಿಕೇಟನ್ನು ಹಾಜರುಪಡಿಸಿದ್ದು ಅದನ್ನು ನಿಆರ್.9 ಎಂದು ಗುರುತಿಸಲಾಯಿತು.

2 ಮತ್ತು 3 ನೇ ಎದುರುದಾರರ ಅಂಗನ್ಯೂನ್ಯತೆಯ ಮೂಲ ಐಡಿ ಕಾರ್ಡನ್ನು ಧೃಡೀಕೃತ ನಕಲಿನೊಂದಿಗೆ ತಾಳೆ ಮಾಡಿ ನೋಡಿ ಎರಡು ಐಡಿ ಕಾರ್ಡನ ಧೃಡೀಕೃತ ನಕಲುಗಳನ್ನು ನಿಪಿ.10 ಮತ್ತು 11 ಎಂದು ಗುರುತಿಸಲಾಯಿತು.

**(ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.,ರವರು ಕಡೂರು.